**Order Sheet**
**In the Court Of: II Addl. CIVIL JUDGE AND JMFC BELAGAVI**
**AT BELGAUM**
**F.R.No:O.S./1318/2012**
**Case Reg.No: O.S./1318/2012**

**Plaintiff** V E R S U S **Defendent**

---

| Plaintiff | Defendent |
| --- | --- |
| **1)Shri. Anand Laxman Sanadi** | **1)Shri. Annappa Laxman Sanadi &5 others**<br><br>**2)Shri. Siddappa Laxman Sanadi**<br>**3)Smt. Nagawwa Wo.Laxman Sanadi**<br>**4)Smt.Shanta Wo. Yallappa Shahapurkar**<br>**5)Smt. Lalita Wo. Mallappa Shahapurkar** |

**ಅಸಲು ದಾವ ಸಂಖ್ಯೆ: 1318/2012 ಡಿಡಬ್ಲೂ.1**

**ಸಾಕ್ಷಿಯನ್ನು ದಿಃ 26-03-2018 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಿಂದ.**

ನನ್ನ ತಂದೆ ಹೆಸರು ಲಕ್ಷ್ಮಣ ಇರುತ್ತದೆ. ಪ್ರತಿವಾದಿ 3 ನನ್ನ ತಾಯಿಯಾಗಬೇಕು. ನನ್ನ ತಂದೆಗೆ ನಾವು 5 ಜನ ಮಕ್ಕಳು ಇರುತ್ತೇವೆ. ಸದರಿ ಮಕ್ಕಳು ಈ ದಾವೆಯ ವಾದಿ ಮತ್ತು 1,2,4 ಮತ್ತು 5 ಪ್ರತಿವಾದಿಗಳೆಂದರೆ ಸರಿ. ಇವರನ್ನು ಹೊರತು ಪಡಿಸಿ ಬೇರೆ ಯಾರು ವಾರಸುದಾರರು ಇಲ್ಲ ಎಂದರೆ ಸರಿ. ದಾವ ಸ್ವತ್ತುಗಳು ನಮ್ಮ ತಂದೆಯ ಕಾಲದಿಂದ ಬಂದ ಆಸ್ತಿಗಳು ಎಂದರೆ ಸರಿ. ನನ್ನ ತಂದೆ ಕೆಇಬಿ ಯಲ್ಲಿ ಕೆಲಸ ಮಾಡುತ್ತಿದ್ದರು. ಅವರು ಯಾವ ಇಸವಿಯಲ್ಲಿ ತೀರಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು 10 ರಿಂದ 12 ವರ್ಷದವನಿದ್ದಾಗ ನನ್ನ ತಂದೆ ತೀರಿಕೊಂಡಿರುತ್ತಾರೆ. ನನ್ನ ತಂದೆ ನೌಕರಿ ಮಾಡುತ್ತಿರುವ ಸಮಯದಲ್ಲಿ ತೀರಿಕೊಂಡಿರುತ್ತಾರೆ. ನನ್ನ ತಂದೆ ತೀರಿಕೊಂಡ ಸಂದರ್ಭದಲ್ಲಿ ಎಷ್ಟು ಹಣ ಬಂದಿತ್ತು ಎಂದು ನನಗೆ ಗೊತ್ತಿಲ್ಲ. ಸದರಿ ಹಣವನ್ನು ನನ್ನ ಸಹೋದರ ನನ್ನ ತಾಯಿ ತೆಗೆದುಕೊಂಡಿರುತ್ತಾರೆ. ಸದರಿ ಹಣದ ಬಗ್ಗೆ ನಾನು ಇದುವರೆಗೂ ವಿಚಾರಿಸಿರುವುದಿಲ್ಲ. ನನ್ನ ತಂದೆಯ ಪಿಂಚಣಿ ನನ್ನ ತಾಯಿಗೆ ಬರುತ್ತಿದೆ ಎಂದರೆ ಸರಿ. ನನ್ನ ಸಹೋದರಿಯರ ಮದುವೆ ನನ್ನ ತಂದೆ ತೀರಿಕೊಂಡ ನಂತರ ಆಗಿರುತ್ತದೆ. ನನ್ನ ಸಹೋದರಿಯರ

ಮದುವೆಯನ್ನು ಯಾರು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಮ್ಮ ಕುಟುಂಬದ ಹಿರಿತನವನ್ನು ನನ್ನ ಅಣ್ಣ ಮತ್ತು ನಮ್ಮ ತಾಯಿ ಮಾಡುತ್ತಿದ್ದರು ಎಂದರೆ ಸರಿ. ನನ್ನ ತಾಯಿ ಮತ್ತು ನನ್ನ ಸಹೋದರ ಮತ್ತು ನಾನು ಒಟ್ಟಿಗೆ ಚೆನ್ನಾಗಿ ಇದ್ದೇವು ಎಂದರೆ ಸರಿ. ಯಾವುದೇ ವ್ಯವಹಾರವನ್ನು ನನ್ನ ಅಣ್ಣ ಮತ್ತು ನನ್ನ ತಾಯಿ ಕೂಡಿ ಮಾಡುತ್ತಿದ್ದರು ಎಂದರೆ ಸರಿ.

ಸಾಂಬ್ರಾ ವಿಮಾನ ನಿಲ್ದಾಣಕ್ಕೆ ಎಷ್ಟು ಜಮೀನು ನಮ್ಮದು ಹೋಗಿರುತ್ತದೆ ಎಂದು ಹಾಗೂ ಎಷ್ಟು ಹಣ ಬಂದಿತ್ತು ಎಂದು ನನಗೆ ಹೇಳಲು ಬರುವುದಿಲ್ಲ. ಸಾಂಬ್ರಾ ವಿಮಾನ ನಿಲ್ದಾಣಕ್ಕೆ 1942 ರಲ್ಲಿ ಜಮೀನು ಹೋಗಿರುತ್ತದೆ ಎಂದರೆ ಸರಿ. ಸದರಿ ಜಮೀನಿಗೆ ಸಂಬಂಧಿಸಿದಂತೆ ಹಣ ನನ್ನ ತಂದೆ ತೀರಿಕೊಂಡ ನಂತರ ಬಂದಿರುತ್ತದೆ. ಸದರಿ ಹಣ ಜಮೀನು ಯಾರ ಹೆಸರಿನಲ್ಲಿ ಇರುತ್ತದೆಯೋ ಅವರ ಹೆಸರಿನಲ್ಲಿ ಬಂದಿರುತ್ತದೆ ಎಂದರೆ ಸರಿ. 1942 ರಲ್ಲಿ ಜಮೀನು ನನ್ನ ತಂದೆಯ ಹೆಸರಿನಲ್ಲಿ ಇದ್ದವು ಎಂದರೆ ಸರಿ. ನನ್ನ ತಂದೆ 1980 ರಲ್ಲಿ ತೀರಿಕೊಂಡಿರುತ್ತಾರೆ ಎಂದರೆ ಸರಿ. ನನ್ನ ತಂದೆ ಮೃತರಾಗುವರೆಗೆ ಜಮೀನುಗಳು ಅವರ ಹೆಸರಿನಲ್ಲಿ ಇದ್ದವು ಎಂದರೆ ಸರಿ. 1996 ರಲ್ಲಿ ನಮ್ಮ ಮೂವ್ವರು ಹೆಸರಿನಲ್ಲಿ ಹಣ ಬಂದಿರುತ್ತದೆ ಎಂದರೆ ಸರಿ. 1996 ರ ಪ್ರಕರಣದಲ್ಲಿ ನಾವು ಯಾವ ವಕೀಲರನ್ನು ನೇಮಿಸಿಕೊಂಡಿದ್ದೇವು ಎಂದು ನನಗೆ ಹೇಳಲು ಬರುವುದಿಲ್ಲ. ನಾವು 1996 ರಲ್ಲಿ ಬಿ.ವಿ ಬೆಲ್ಲದ ವಕೀಲೀರನ್ನು ನೇಮಕ ಮಾಡಿಕೊಂಡಿದ್ದು ಅವರು ತೀರಿಕೊಂಡ ನಂತರ ಶಡಶಾಳ ವಕೀಲರನ್ನು ನೇಮಿಸಿಕೊಂಡಿದ್ದೇವು ಎಂದರೆ ನನಗೆ ಗೊತ್ತಿಲ್ಲ. 1995-96 ನೇ ಇಸವಿಯಲ್ಲಿ ಹಣ ಬಂದಿರುತ್ತದೆ ಆದರೆ ಎಷ್ಟು ಹಣ ಬಂದಿರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ. ನನ್ನ ತಂದೆ ತೀರಿಕೊಂಡ ನಂತರ ವಾರಸ ಪ್ರಕಾರ ಜಮೀನುಗಳಿಗೆ ನನ್ನ ಹಾಗೂ ನನ್ನ ತಾಯಿ ಮತ್ತು ನನ್ನ ಸಹೋದರನ ಹೆಸರನ್ನು ಮಾತ್ರ ದಾಖಲಿಸಿಕೊಂಡಿರುತ್ತೇವೆ ಎಂದರೆ ಸರಿ. 1996 ರಲ್ಲಿ ಕುಟುಂಬದ ಹಿರಿತನವನ್ನು ನನ್ನ ತಾಯಿ ಮಾಡುತ್ತಿದ್ದರು. ಈಗ 5-6 ವರ್ಷಗಳ ಹಿಂದೆ ನಾವು ಬೇರೆಯಾಗಿದ್ದು ಅಲ್ಲಿಯವರೆಗೆ ಸಹ ನನ್ನ ತಾಯಿ ಹಿರಿತನವನ್ನು ಮಾಡುತ್ತಾ ಬಂದಿರುತ್ತಾರೆ. ನಾವು ಬೇರೆಯಾಗಿರುತ್ತೇವೆ ಎಂಬ ಬಗ್ಗೆ ತೋರಿಸಲು ಯಾವುದೇ ಕಾಗದ ಹಾಜರು ಪಡಿಸಿಲ್ಲ ಎಂದರೆ ಸರಿ. ನಾವು ಬೇರೆಯಾಗುವ ಪೂರ್ವದಲ್ಲಿನ ವ್ಯವಹಾರಗಳ ಬಗ್ಗೆ ನನಗೆ ಗೊತ್ತಿರುವುದಿಲ್ಲ.

ನನ್ನ ಸಹೋದರಿಯರು ಈಗಲೂ ಸಹ ತಮ್ಮ ತವರು ಮನಗೆ ಹೋಗಿ ಬಂದು ಮಾಡುತ್ತಾರೆ. ಸದರಿಯವರು ನಮ್ಮೆಲ್ಲರ ಕಡೆ ಬಂದು ಹೋಗಿ ಮಾಡುತ್ತಾರೆ. ನನ್ನ ಸಹೋದರಿಯರಲ್ಲಿ ಪ್ರತಿವಾದಿ 4 ನನಗಿಂತ ದೊಡ್ಡವರಿದ್ದು ಪ್ರತಿವಾದಿ 5 ನೇದವರು ನನಗಿಂತ ಚಿಕ್ಕವರಿರುತ್ತಾರೆ. ನನ್ನ ಸಹೋದರಿಯರನ್ನು

ಸಿಂದೊಳ್ಳಿ ಗ್ರಾಮಕ್ಕೆ ಮದುವೆ ಮಾಡಿ ಕೊಡಲಾಗಿರುತ್ತದೆ. ಪ್ರತಿವಾದಿ 4 ರವರರಿಗೆ ಗಂಡು ಮಗನಿದ್ದು ಈಗ 4 ವರ್ಷಗಳ ಹಿಂದೆ ಎಸ.ಎಸ.ಎಲ್.ಸಿ ಮುಗಿಸಿರುತ್ತಾನೆ. ಪ್ರತಿವಾದಿ 5 ನೇದವರಿಗೆ ಮಗಳಿದ್ದು ಅವಳ ಮದುವೆಯಾಗಿರುತ್ತದೆ ಎಂದರೆ ಸರಿ. ನಮ್ಮಕುಟುಂಬದಲ್ಲಿ ವಾಟಣಿ ಪತ್ರ ಆಗಿರುತ್ತದೆ ಇಲ್ಲವೊ ಎಂದು ನನಗೆ ಗೊತ್ತಿಲ್ಲ. ಅದಕ್ಕೆ ನನ್ನ ಸಹೋದರಿಯರು ಸಹಿ ಮಾಡಿರುತ್ತಾರೊ ಇಲ್ಲವೋ ನನಗೆ ಗೊತ್ತಿಲ್ಲ. ನಮ್ಮ ಕುಟುಂಬದಲ್ಲಿ ಯಾವುದೇ ವಾಟಣಿ ಆಗದೇ ಇರುವದರಿಂದ ಆ ಬಗ್ಗೆ ಯಾವುದೇ ಕಾಗದ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ.

ಮತ್ತೆ ಸಾಂಬ್ರಾ ವಿಮಾನ ನಿಲ್ದಾಣಕ್ಕೆ ಈಗ 8-9 ವರ್ಷಗಳ ಇಚೆಗೆ ಜಮೀನು ತೆಗೆದುಕೊಂಡಿರುತ್ತಾರೆ ಎಂದರೆ ಸರಿ. ಅದಕ್ಕೆ ಸಂಬಂದಿಸಿದಂತೆ ಹಣ ಬಂದಿರುತ್ತದೆ ಎಂದರೆ ಸರಿ. ಸದರಿ ಹಣವನ್ನು ನಾನು ಮತ್ತು ಪ್ರತಿವಾದಿ 2 ಮತ್ತು ವಾದಿ ಮಾತ್ರ ಪಡೆದಿರುತ್ತೇವೆ. ಸದರಿ ಹಣದ ಬಗ್ಗೆ ಮೇಲ್ಮನವಿ ದಾಖಲಿಸಿರುತ್ತೇವೆ ಎಂದರೆ ಸರಿ. ಸದರಿ ನನ್ನ ಹೆಸರಿನಲ್ಲಿ ಬಂದ ಹಣವನ್ನು ನಾವು ಮೂರು ಜನ ಹಂಚಿಕೊಂಡಿದ್ದು ಆದರೆ ವಾದಿ ಮತ್ತು 2 ನೇ ಪ್ರತಿವಾದಿಯ ಹೆಸರಿನಲ್ಲಿ ಬಂದ ಹಣವನ್ನು ಅವರವರೇ ಇಟ್ಟುಕೊಂಡಿರುತ್ತಾರೆ. ನನ್ನ ಹೆಸರಿನಲ್ಲಿ ಬಂದ ಹಣವನ್ನು ಅವರಿಗೆ ನೀಡಿದ ಬಗ್ಗೆ ಹಾಗೂ ಅವರ ಹೆಸರಿನಲ್ಲಿ ಬಂದ ಹಣವನ್ನು ಅವರು ನೀಡದೇ ಇದ್ದ ಬಗ್ಗೆ ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ನ್ಯಾಯಾಲಯದಲ್ಲಿ ಯಾರ ಹೆಸರಿನಲ್ಲಿ ಹಣ ಬಂದಿರುತ್ತೆದೆಯೋ ಅವರ ಹೆಸರಿನಲ್ಲಿ ಚೆಕ್ಕ ನೀಡುತ್ತಾರೆ ಎಂದರೆ ಸರಿ. ನಮಗೆ ಮೂರು ಮಂದಿಗೂ ಪ್ರತೇಕವಾಗಿ ಚೆಕ್ಕಗಳು ಬಂದಿರುತ್ತವೆ ಎಂದರೆ ಸರಿ. ನನ್ನ ಹೆಸರಿನಲ್ಲಿ ಬಂದ ಹಣವನ್ನು ಅವರಿಗೆ ನೀಡಿದ ಬಗ್ಗೆ ಹಾಗೂ ಅವರು ನನಗೆ ಹಣವನ್ನು ನೀಡದೆ ಇದ್ದ ಬಗ್ಗೆ ನಾನು ಯಾವುದೇ ಪ್ರಕರಣ ಅವರ ವಿರುದ್ದ ದಾಖಲಿಸಿರುವುದಿಲ್ಲ. ನನ್ನ ಹೆಸರಿನಲ್ಲಿ ಬಂದ ಹಣವನ್ನು ನಾನೇ ಇಟ್ಟುಕೊಂಡಿದ್ದು ಅವರ ಹೆಸರಿನಲ್ಲಿ ಬಂದ ಹಣವನ್ನು ಅವರೇ ಇಟ್ಟುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದಡೇದ ಎಂಬ ವಕೀಲರು ಆ ಪ್ರಕರಣವನ್ನು ನಡೆಸುತ್ತಿದ್ದಾರೆ. ನಾನು ಆ ಬಗ್ಗೆ ಯಾವುದೇ ಸಾಕ್ಷಿಯನ್ನು ಮಾಡಿಸುವುದಿಲ್ಲ.

**ಮುಂದುವರೆದ ಪಾಟೀ ಸವಾಲಿಗಾಗಿ ಸಮಯ ಕೋರಿದ್ದು ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಮೇರೆಗೆ ಗಣಕೀಕೃತದಿಂದ ಬೆರಳಚ್ಚು ಮಾಡಲಾಯಿತು)**

**Sd/-**

**2 ನೇ ಹೆಚ್ಚುವರಿ ನ್ಯಾಯಾಧೀಶರು ಮತ್ತು ಜೆ.ಎಮ್. ಎಫ್. ಸಿ**

**ನ್ಯಾಯಾಲಯ ಬೆಳಗಾವಿ.**

ಓ.ಕೆ.ಒ. ಸ.ಮಾ.